ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಡಿ.ಎಸ್. ಅರುಣ್ ರವರು ನಿಯಮ 330 ಅಡಿಯಲ್ಲಿ ನೀಡಿರುವ ಸೂಚನ ಪ್ರಶ್ನೆಗೆ ಉತ್ತರವನ್ನು ಸಲ್ಲಿಸುತ್ತಿರುವ ಬಗ್ಗೆ.

ಪ್ರಶ್ನೆ:

ಸರ್ಕಾರಿ ಶಾಲೆಗಳಲ್ಲಿ ಸ್ಮಾರ್ಟ್‌ಕ್ಲಾಸ್ ಯೋಜನೆ ಜಾರಿಗೆ ತರುವಲ್ಲಿ ಸಿಂಗಲ್ ಪೇಸ್ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿರುವುದು ಹಾಗೂ ಕಡಿಮೆ ವಿದ್ಯುತ್ ಸರಬರಾಜು ಶಾಲೆಗಳಲ್ಲಿ ಯು.ಪಿ.ಎಸ್. ಮೂಲಕ ವಿದ್ಯುತ್ ಸಂಪರ್ಕದ ಬ್ಯಾಟರಿಗಳ ಸಾಮರ್ಥ್ಯ ಕಡಿಮೆಯಾಗುವ ಹಾಗೂ ಕಲವು ಸಂದರ್ಭದಲ್ಲಿ ವಿದ್ಯುತ್ ಅವಗಡಗಳು ಉಂಟಾಗುವ ಸಾಧ್ಯತೆ ಬಗ್ಗೆ ಸದರಿ ಯೋಜನೆಯ ವಿದ್ಯುತ್ ಬಿಲ್ ಪಾವತಿಯ ಗೊಂದಲಗಳ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಬಳಿ ಹಾಗೂ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಉತ್ತರ:

ಟ್ಯಾಲ್ಫ್ ಕಾರ್ಯಕ್ರಮವನ್ನು 2016-17ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. TALP ಯೋಜನೆಯಡಿಯಲ್ಲಿ 2016-17 ಸಾಲಿನಲ್ಲಿ ಆಯ್ಕೆಯಾದ 1000 ಸರ್ಕಾರಿ ಪ್ರೌಢಶಾಲೆಗಳಿಗೆ 15,945 ಆಲ್ ಇನ್ ಒನ್ ಕಂಪ್ಯೂಟರ್ ಗಳ ಸರಬರಾಜು ಹಾಗೂ ಕೊಠಡಿ ಸಿದ್ಧತೆ ಮಾಡಲಾಗಿದೆ.

2019-20 ಸಾಲಿನಲ್ಲಿ SWF-TBF ಯೋಜನೆಯಡಿ 349 ಸರ್ಕಾರಿ ಪ್ರೌಢಶಾಲೆಗಳಿಗೆ ತಲಾ 10 ರಂತೆ ಒಟ್ಟು 3490 ಆಲ್ ಇನ್ ಒನ್ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲಾಗಿದೆ ಮತ್ತು ಕೊಠಡಿ ಸಿದ್ಧತೆ ಮಾಡಲಾಗಿದೆ.

2019-20ನೇ ಸಾಲಿನಲ್ಲಿ SCP-TSP ಯೋಜನೆಯಡಿ 284 ಸರ್ಕಾರಿ ಪ್ರೌಢಶಾಲೆಗಳಿಗೆ ತಲಾ 10 ರಂತೆ 2840 ಆಲ್ ಇನ್ ಒನ್ ಕಂಪ್ಯೂಟರ್‌ಗಳ ಸರಬರಾಜು ಮಾಡಲಾಗಿದೆ ಮತ್ತು ಕೊಠಡಿ ಸಿದ್ಧತೆ ಮಾಡಲಾಗಿದೆ.

KKRDB ಯೋಜನೆಯಡಿ 2019-20ನೇ ಸಾಲಿನಲ್ಲಿ 718 ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತಿ ಶಾಲೆಗೆ 10 ರಂತೆ ಆಲ್ ಇನ್ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲಾಗಿದೆ.

41-330

TALP ಯೋಜನೆಯಡಿಯಲ್ಲಿ 2021-22ನೇ ಸಾಲಿನಲ್ಲಿ 170 ಸರ್ಕಾರಿ ಪ್ರೌಢಶಾಲೆಗಳಿಗೆ ತಲಾ 10 ರಂತೆ Mini PC ಹಾಗೂ ತಲಾ 01 ರಂತೆ 2 ಕೆ.ವಿ.ಎ ಸಾಮಾರ್ಥ್ಯವುಳ್ಳ ಯು.ಪಿ.ಎಸ್‌ಗಳನ್ನು ಒದಗಿಸಲಾಗಿದೆ.

ಮುಂದುವರೆದ ಇತ್ತೀಚಿನ ನೂತನ ತಂತ್ರಜ್ಞಾನದಂತೆ ಪೂರೈಸಲಾಗಿರುವ ಆಲ್ ಇನ್ ಒನ್ ಕಂಪ್ಯೂಟರ್‌ಗಳು ಅತಿ ಕಡಿಮೆ ವಿದ್ಯುತ್ ಬಳಕೆ ಮಾಡುವುದರಿಂದ 01 ಫೇಸ್ ವಿದ್ಯುತ್ ಸಂಪರ್ಕ ದಲ್ಲಿ ನಿರ್ವಹಣೆ ಮಾಡಬಹುದಾಗಿದ್ದು, ವಿದ್ಯುತ್ ವೆಚ್ಚ ಕಡಿಮೆಯಾಗುವುದು.

ಸರ್ಕಾರಿ ಪ್ರೌಢ ಶಾಲೆಗಳಿಗೆ ವಿದ್ಯುತ್ ಬಿಲ್ ಪಾವತಿಗಾಗಿ ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿ ವತಿಯಿಂದ ಶಾಲಾ ನಿರ್ವಹಣಾ ಅನುದಾನವನ್ನು ಒದಗಿಸಲಾಗುತ್ತಿದೆ.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಮೇಲ್ಕಂಡ ಎಲ್ಲಾ ಕ್ರಮಗಳನ್ನು ಪಾಲಿಸುವ ಮೂಲಕ ವಿದ್ಯುತ್ ವ್ಯವಸ್ಥೆಯನ್ನು ತೊಂದರೆಯಿಲ್ಲದಂತೆ ನಿರ್ವಹಿಸಲಾಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಮಸ್ಯೆಗಳು ಉಂಟಾಗಬಹುದು. ಆದರೂ ಈವರೆಗೂ ವಿದ್ಯುತ್ ಅವಘಡಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳ ಮಾಹಿತಿ ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.

**ಇಪಿ 267 ಎಂ.ಹೆಚ್.ಟಿ 2022**

(ಬಿ.ಸಿ.ನಾಗೇಶ್)

ಪ್ರಾಥಮಿಕ, ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು